(vi) ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಬಗ್ಗೆ ಶಿವಸೇನೆ ನಾಯಕರ ಬೆದರಿಕೆ

ಡಾ|| ವಿ.ಎಸ್. ಆಚಾರ್ಯ.—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬೊಂಬಾಯಿ ಡೇಟ್ ಲೈನ್ ಹಾಕಿದಂತಹ ಕಳವಳಕಾರಿಯಾದ ಒಂದು ವಿಷಯ ಪ್ರಕಟವಾಗಿದೆ. ಇದನ್ನು ಅನೇಕರು ಗಮನಿಸಿರಬಹುದು. ಮುಖ್ಯವಾಗಿ ಸರ್ಕಾರದ ಗಮನಕ್ಕೆ ತರಬೇಕು ಎನ್ನುವ ದೃಷ್ಟಿಯಿಂದ ಇದನ್ನು ನಾನು ಇಲ್ಲಿ ತರುತ್ತಿದ್ದೇನೆ. ವಿಷಯವೇನೆಂದರೆ ಶಿವಸೇನೆಯ ನಾಯಕ ರಾದಂಥ ಬಾಳಠಾಕರೆಯವರು ಸಮ್ಮೇಳನವೊಂದರಲ್ಲಿ ಬಹಳ ಉಗ್ರವಾದ ಭಾಷಣ ಮಾಡಿ ಏನೊಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ, ಇದರ ಬಗ್ಗೆ ಸರ್ಕಾರದವರು ಗಮನ ಕೊಡಬೇಕು. ಒಂದನೆಯದು ಮಹಾರಾಷ್ಟ್ರ–ಕರ್ನಾಟಕ ಗಡಿ ಪ್ರಶ್ನೆಯನ್ನು ಬಗೆಹರಿಸಲು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಪ್ರಯತ್ನಿಸದೇ ಇದ್ದರೆ ಮುಂಬೈಯಲ್ಲಿರತಕ್ಕಂಥ ಯಾವುದೇ ಕನ್ನಡ ಶಾಲೆಗಳನ್ನು ನಡೆಯಕೊಡುವುದಿಲ್ಲ ಎನ್ನುವ ವಿಷಯವನ್ನು ಇದರಲ್ಲಿ ತಿಳಿಸಿದ್ದಾರೆ. ಇನ್ನೊಂದು ವಿಷಯವೆಂದರೆ ಈ ತಿಂಗಳ ಅಖೈರಿನಲ್ಲಿ ಪ್ರಧಾನ ಮಂತ್ರಿಗಳು ಮತ್ತು ರಾಷ್ಟ್ರಪತಿಯವರು ಮುಂಬೈಗೆ ಭೇಟಿ ಕೊಡಲು ಬರುವವರಿದ್ದಾರೆ. ಅವರು ವಿಮಾನದಲ್ಲಿ ಅಥವಾ ಹೆಲಿಕಾಪ್ಟರ್‌ನಲ್ಲಿ ನಿಲ್ದಾಣದಲ್ಲಿ ಇಳಿದು ನಂತರ ಬೊಂಬಾಯಿಯ ಕಾರ್ಯಕ್ರಮದ ಜಾಗಕ್ಕೆ ಹೋಗಲು ಬಿಡುವುದಿಲ್ಲ ಎಂದು ಹೇಳಿದ್ದಾರೆ. ಈ ರೀತಿಯಾದ ಘೋಷಣೆಯನ್ನು ಹಾಕಿದ್ದಾರೆ. ಈ ವಿಷಯ ಅವರು ಅಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು ಪತ್ರಿಕೆಯಲ್ಲಿ ಬಂದಿರುವುದರಿಂದ ಇದರ ಪರಿಣಾಮ ಏನಾಗಬಹುದು? ಇದು ಕರ್ನಾಟಕದ ಪರಿಸ್ಥಿತಿ ಒಂದೇ - ಅಲ್ಲ, ತಮಗೆ ಗೊತ್ತಿರುವ ಹಾಗೆ ನಮ್ಮ ದೇಶದಲ್ಲಿ ಬೆಂಗಳೂರು ಮತ್ತು ಮೈಸೂರು ಬಿಟ್ಟರೆ ಅತಿ ಹೆಚ್ಚು ಕನ್ನಡಿಗರು ವಾಸವಾಗಿರತಕ್ಕಂಥ ನಗರ ಬೊಂಬಾಯಿ. ಇಂತಹ ಮುಂಬೈ ನಗರದಲ್ಲಿ ನೂರಾರು ಕನ್ನಡ ಶಾಲೆಗಳು, ನೂರಾರು ಹೈಸ್ಕೂಲುಗಳು ಇವೆ. ಇಂತಹ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರ ಕರ್ನಾಟಕ ಗಡಿ ಪ್ರಶ್ನೆಯನ್ನು ಕರ್ನಾಟಕದ ಮುಖ್ಯಮಂತ್ರಿಗಳು ಶೀಘ್ರವಾಗಿ ಪರಿಹರಿಸುವಂತೆ ನೋಡಬೇಕು. ಇಲ್ಲದೇ ಹೋದರೆ ಕನ್ನಡ ಶಾಲೆಗಳನ್ನು ನಡೆಯಕೊಡುವುದಿಲ್ಲ ಎನ್ನುವುದು ಅವರ ಮೊದಲನೇ ಹೇಳಿಕೆ. ಎರಡನೇಯದು ಪ್ರಧಾನ ಮಂತ್ರಿಗಳು ಮತ್ತು ರಾಷ್ಟ್ರಪತಿಯವರು ಬೊಂಬಾಯಿಗೆ ಬರುವುದಕ್ಕೇ ಬಿಡುವುದಿಲ್ಲ ಎಂಬುದು. ಈ ರೀತಿಯಾಗಿ ಬೆದರಿಕೆ ಕೊಟ್ಟಿರುವಂತಾದ್ದು, ಇದರಿಂದ ದೊಡ್ಡದಾದಂತಹ ಗಂಭೀರಕರ ಪರಿಸ್ಥಿತಿ ನಿರ್ಮಾಣ ಆಗಲಿಕ್ಕೆ ಸಾಧ್ಯತೆ ಇದೆ. ಇದರ ಬಗ್ಗೆ ಸರ್ಕಾರ ಎಚ್ಚರಿಕೆ ವಹಿಸಬೇಕು. ಅಲ್ಲಿ ಕನ್ನಡ ಶಾಲೆಗಳಿಗೆ ಮಕ್ಕಳು ಹೋಗುವುದು ಮಾತ್ರವಲ್ಲ, ವಿವಿಧ ರಂಗಗಳಲ್ಲಿ ಇರುವ ಕನ್ನಡಿಗರು ಇದ್ದಾರೆ. ಇದರಿಂದಾಗಿ ಯಾವ ಮಟ್ಟಕ್ಕೆ ಪರಿಸ್ಥಿತಿ ಹೋಗಿ ಮುಟ್ಟಬಹುದೆಂಬುದನ್ನು ಸರ್ಕಾರ ಗಮನಿಸಬೇಕು. ಇದರ ಬಗ್ಗೆ ಸರ್ಕಾರದ ಅಭಿಪ್ರಾಯ ಏನೆಂಬುದನ್ನು ಹೇಳಬೇಕೆಂದು ನಾನು ಕೇಳುತ್ತೇನೆ. ಮೊದಲು ಕನ್ನಡಿಗರ ಹಿತರಕ್ಷಣೆ ಆಗಬೇಕು. ಏಕೆಂದರೆ ನಾವು ಕನ್ನಡಿಗರು ಸಹನಾಶೀಲರು ಎಂಬುದನ್ನು ತೋರಿಸಿಕೊಟ್ಟಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಪತ್ರಿಕೆಯಲ್ಲಿ ಬಂದಿರುವ ಸುದ್ದಿಯನ್ನು ನಾನು ಕೂಡ ನೋಡಿದ್ದೇನೆ. ನನಗೂ ಕೂಡ ಸ್ವಲ್ಪಮಟ್ಟಿಗೆ ಕಳವಳ ಆಗಿದೆ. ಆದರೆ ಶ್ರೀಮಾನ್ ಬಾಳಠಾಕರೆಯವರ ಆರ್ಭಟದ ಮತ್ತು ಆಕ್ರೋಶದ ಹೇಳಿಕೆಗೆ ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಶ್ರೀಮಾನ್ ಠಾಕರೆಯವರು ಗಡಿ ಸಮಸ್ಯೆ ಮತ್ತು ಇನ್ನಿತರ ಕನ್ನಡಿಗರ ವಿಚಾರವನ್ನು ಏನು ಹೇಳಿದ್ದಾರೆ, ಭರ್ಜಿ ಚೂರಿ ಕೋವಿಗಳನ್ನು ತೆಗೆದುಕೊಂಡು ಹೋಗಿಬಿಡುತ್ತೇವೆ ಎನ್ನತಕ್ಕಂಥ ಬೆದರಿಕೆಯನ್ನು ಅವರು ಏನು ಹಾಕಿದ್ದಾರೆ ಇದಕ್ಕೆ ಉತ್ತರ ರೂಪವಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಹೇಳಿದ್ದಾರೆ ಏನೆಂದರೆ ಇಂಥಾದ್ದನ್ನೆಲ್ಲ ನಾವು ಮಾಡುವುದಕ್ಕೆ ಹೋಗಕೂಡದು ಮತ್ತು ಇದನ್ನು ನಾವು ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಗಡಿ ಸಮಸ್ಯೆ ಬಗ್ಗೆ ಒಂದು ಸುತ್ತಿನ ಮಾತುಕತೆ ಈಗಾಗಲೇ ಆಗಿದೆ. ಮತ್ತೊಮ್ಮೆ ಸಾಧ್ಯವಾದರೆ ಫೆಬ್ರುವರಿ ತಿಂಗಳಿನಲ್ಲಿ ಪುನಃ ಸೇರುತ್ತೇವೆ ಎಂಬ ಉತ್ತರವನ್ನು ಅವರು ಕೊಟ್ಟಿದ್ದಾರೆ. ನನಗೆ ವಿಶ್ವಾಸ ಇದೆ, ಇಂಥಾದ್ದು ಏನಾದರೂ ಆದರೆ ಕನ್ನಡಿಗರ ಆಸ್ತಿಪಾಸ್ತಿಗಳಿಗೆ, ಪ್ರಾಣಕ್ಕೆ ಅಪಾಯ ವಾಗತಕ್ಕಂಥ ಪರಿಸ್ಥಿತಿ ಬಂದೊದಗಿದರೆ ಮಹಾರಾಷ್ಟ್ರ ಸರ್ಕಾರದವರು ಯೋಗ್ಯವಾದ ಸೂಕ್ತ ಪಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಮತ್ತು ರಕ್ಷಣೆಯನ್ನು ಕೊಡುತ್ತಾರೆ ಎಂದು ನಾನು ಅಸೆ ಮಾಡುತ್ತೇನೆ ಮತ್ತು ವಿಶ್ವಾಸ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಕಳೆದ ಎರಡು ಮೂರು ದಿವಸಗಳಿಂದ ಯಾವ ಮಾತುಗಳನ್ನು ಈ ಸದನದಲ್ಲಿ ಹೇಳಿದ್ದೆನೋ ಆ ಮಾತಿನ ಅರ್ಥ ಬಹುಶಃ ಈಗ ಕೆಲವು ಜನರಿಗೆ ಆಗಿರಬಹುದು.

ಬೊಂಬಾಯಿ ಶಹರವೊಂದರಲ್ಲೇ ಹತ್ತು ಲಕ್ಷ ಜನ ಕನ್ನಡಿಗರು ಇದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಅಲ್ಲಿ ಶಾಂತಿ ಇದೆ. ಅದಕ್ಕೂ ಹಿಂದೆ ಕನ್ನಡಿಗರ ಮೇಲೆ ಯಾವ ದಬ್ಬಾಳಿಕೆ ಆಯಿತು, ಕನ್ನಡಿಗರ ಆಸ್ತಿಪಾಸ್ತಿಗಳನ್ನು ಯಾವ ರೀತಿ ಲೂಟಿ ಮಾಡಿದರು, ಬೆಂಕಿ ಹಚ್ಚಿದರು, ಎಷ್ಟು ಜನ ಕನ್ನಡಿಗರನ್ನು ಕೊಂದರು ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು. ಅದಕ್ಕೋಸ್ಕರ ನಾನು ಸಾರಿ ಸಾರಿ ಹೇಳುತ್ತೇನೆ. ಏನೆಂದರೆ ಭಾಷೆಯಂತಹ ಭಾವನಾ ಪ್ರಧಾನವಾದ ವಿಷಯವನ್ನು ತೆಗೆದುಕೊಂಡು ಅದು ಪ್ರಕೋಪಕ್ಕೆ ಹೋಗುವ ಹಾಗೆ ಭಾಷಣವನ್ನು ನಾವು ಮಾಡಬಾರದು. ಭಾಷೆಯ ಬಗ್ಗೆ ಅಭಿಮಾನ ಬೇಕು. ಆದರೆ ಬೇರೆಯವರಿಗೂ ಕೂಡ ತಮ್ಮ ಭಾಷೆ ಬೇಕೆನ್ನುವ ವಿಷಯವನ್ನು ಸಹಿಸಬೇಕಾಗುತ್ತದೆ. ನಮಗೆ ಮಾತ್ರ ಭಾಷೆ ಬೇಕು, ಬೇರೆಯವರ ಭಾಷೆಯನ್ನು ಸಹಿಸತಕ್ಕದ್ದಲ್ಲ ಎನ್ನುವ ನಿಲುವು ಸಾಧುವಾದುದಲ್ಲ. ನನಗೆ ಒಂದು ಸಲ ನೆನಪು ಮಾಡಿಕೊಂಡರೆ ಕಳವಳವಾಗುತ್ತದೆ. ಈಗ ಎಂಟು ಹತ್ತು ವರ್ಷಗಳ ಹಿಂದೆ ಮಹಾರಾಷ್ಟ್ರದಲ್ಲಿ ಪುಣೆಯಲ್ಲಿ ಕೊಲ್ಲಾಪುರ, ಸೊಲ್ಲಾಪುರದಲ್ಲಿ ಬೊಂಬಾಯಿ ಬಿಟ್ಟು ಬೇರೆ ಕಡೆಗಳಲ್ಲಿ ಏನೇನು ಅನಾಹುತ ಆಯಿತು ಅನೇಕ ಕನ್ನಡಿಗರಿಗೆ ಸೇರಿದ ಹೋಟೆಲುಗಳನ್ನು ಸುಟ್ಟು ಹಾಕಲಾಯಿತು. ಲಕ್ಷಾಂತರ ರೂಪಾಯಿ ಯಷ್ಟು ಹಾನಿಯಾಗಿದೆ. ಆದ್ದರಿಂದ ಭಾಷೆ ವಿಷಯದಲ್ಲಿ ನಾವು ಸಂಯಮದಿಂದಲೇ ವರ್ತಿಸಬೇಕಾಗುತ್ತದೆ. ಬಾಳ ಠಾಕರೆಯವರು ಎತ್ತಿರುವ ವಿಷಯದ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಯವರಿಗೆ ನಾನು ಈಗಾಗಲೇ ಪತ್ರವನ್ನು ಬರೆದಿದ್ದೇನೆ. ಯಾವುದೇ ರೀತಿಯಿಂದ ಕನ್ನಡಿಗರ ಹಕ್ಕು ಅವರ ಆಸ್ತಿಪಾಸ್ತಿ, ಪ್ರಾಣಕ್ಕೆ ಗಂಡಾಂತರ ಬಾರದಂತೆ ನೋಡಿಕೊಳ್ಳಬೇಕೆಂದು ಈಗಾಗಲೇ ತಿಳಿಸಿದ್ದೇನೆ.

(vii) ಪಡಿತರದಲ್ಲಿ ಕೊಡುತ್ತಿರುವ ಕಳಪೆ ಆಹಾರ ಧಾನ್ಯಗಳ ಬಗ್ಗೆ

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ಹರಿಜನರ ಸಾಗುವಳಿ ಬಗ್ಗೆ ಒಂದು ಸೂಚನೆ ಮತ್ತು ಆಹಾರ ನಿಗಮದವರ ಪಡಿತರ ವ್ಯವಸ್ಥೆ ಬಗ್ಗೆ ಒಂದು ಸೂಚನೆ ಕಳುಹಿಸಿದ್ದೇನೆ.

ಅಧ್ಯಕ್ಷರು.—ತಾವು ಯಾವುದಾದರೂ ಒಂದು ಸೂಚನೆ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ನಾನು ಕರ್ನಾಟಕ ಆಹಾರ ನಿಗಮದ ಪಡಿತರ ವ್ಯವಸ್ಥೆ ಬಗ್ಗೆ ಅವರ ವ್ಯಾಪಾರದ ಹಾಗೂ ಗುಣಮಟ್ಟದ ಬಗ್ಗೆ ಈಗ ಹೇಳುತ್ತೇನೆ. ಅವರು ಈ ಪದಾರ್ಥವನ್ನು ಕೊಡಬೇಕಾದರೆ ನಗದು ಬಿಲ್ಲು ಹಾಕುವುದಿಲ್ಲ. ಡೆಲಿವರಿ ನೋಟನ್ನು ತರಿಸಿಕೊಂಡು ಅದರಲ್ಲಿ ರುಜು ಹಾಕಿಸಿಕೊಳ್ಳುತ್ತಾರೆ. ಅದರಲ್ಲಿ ತೂಕ ಮತ್ತು ಇತರ ವ್ಯವಸ್ಥೆಗಳು ಉತ್ತಮ ರೀತಿಯಲ್ಲಿದೆ ಎನ್ನುವುದನ್ನು ಪ್ರಿಂಟ್ ಮಾಡಿಸಿದ್ದಾರೆ. ಅದರ ಮೇಲೆ ಅವರು ರುಜು ತೆಗೆದುಕೊಂಡು ಇವರಿಗೆ ಕೊಡುತ್ತಾರೆ. ನಾನು ಅವರು ವ್ಯಾಪಾರ ಮಾಡಿದ ಕಳಪೆ ಗೋಧಿಯ ಬಗ್ಗೆ ಈಗ ಸ್ಯಾಂಪಲ್ ತಂದಿದ್ದೇನೆ. ಅದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಇದರ ಬಗ್ಗೆ ನನಗೆ ಅವರು ವಿವರಣೆಯನ್ನು ಕೊಡಬೇಕಾಗುತ್ತದೆ, ಎಲ್ಲಾ ಕಡೆಯೂ ಇದೇ ರೀತಿ ನಡೆಯುತ್ತಾ ಇದೆ. ಎರಡು ಸೊಸೈಟಿಯವರು ಇದರ ಬಗ್ಗೆ ಮಹಜರ್ ನಡೆಸಿ ಆಹಾರ ನಿಗಮಕ್ಕೆ ದೂರು ಕೊಟ್ಟಿದ್ದರೂ ಸಹ ಅವರು ಕಿವಿಗೊಡುತ್ತಾ ಇಲ್ಲ. ಗುಲ್ಬರ್ಗಾದ ಒಂದು ಸೊಸೈಟಿಯವರು ಇದರ ಬಗ್ಗೆ ಒಂದು ಪತ್ರವನ್ನು ಬರೆದಿದ್ದಾರೆ ಅದನ್ನು ಮತ್ತು ಈ ಕಳಪೆ ಗೋಧಿ ಎರಡನ್ನೂ ಸಹ ಮಾನ್ಯ ಮಂತ್ರಿಗಳಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ಕಳುಹಿಸಿಕೊಟ್ಟು, ಸರ್ಕಾರದ ಗಮನವನ್ನು ಇದರ ಬಗ್ಗೆ ಸೆಳೆಯಬಯಸುತ್ತೇನೆ.

ಅಧ್ಯಕ್ಷರು.—ತಾವು ಇದನ್ನು ಸ್ವೀಕಾರ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಸ್ವೀಕಾರ ಮಾಡುತ್ತೇನೆ.

(ಮಾನ್ಯ ಸದಸ್ಯರು ತಂದಿರತಕ್ಕಂಥಾ ಕಳಪೆ ಗೋಧಿ ಮತ್ತು ಅದರ ಜೊತೆಯಲ್ಲಿ ಒಂದು ಪತ್ರ ಇವೆರಡನ್ನೂ ಕೂಡ ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಯವರಿಗೆ ಕಳುಹಿಸಿಕೊಟ್ಟರು.)

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಸ್ವಲ್ಪ ವಿವರಣೆಯನ್ನು ಹೇಳಬಯಸುತ್ತೇನೆ. ಅದೇನೆಂದರೆ ನಾವು ಈ ಆಹಾರ ಪದಾರ್ಥಗಳನ್ನು ಆಹಾರ ನಿಗಮದ